ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **729/2024**

| | | | |
|---|---|---|---|
| ಸಾಕ್ಷಿಯ ಹೆಸರು | : ಶ್ರೀಕಾಂತ್.ಪಿ | | ಸಿ.ಡಬ್ಲ್ಯು 7 |
| ತಂದೆಯ ಹೆಸರು | : ಪರಸಪ್ಪ | | ಪಿ.ಡಬ್ಲ್ಯು 4 |
| ವಯಸ್ಸು | : 37 ವರ್ಷ | | |
| ಉದ್ಯೋಗ | : ಅಬಕಾರಿ ನಿರೀಕ್ಷಕರು | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕ:**02-02-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ದಿನಾಂಕ 26.07.2024 ರಿಂದ ಇಲ್ಲಿಯವರೆಗೆ ತರೀಕೆರೆಯಲ್ಲಿ ಅಬಕಾರಿ ನಿರೀಕ್ಷಕರು ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 22.09.2024 ರಂದು ಪ್ರಕರಣದ ಕಡತವನ್ನು ಚಾಸ-1 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ದಿನಾಂಕ 26.09.2024 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಮು.ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಿದ್ದೇನೆ. ದಿನಾಂಕ 04.10.2024 ರಂದು ಪ್ರಕರಣದ ಪಂಚರಾದ ಚಾಸ-2 ಮತ್ತು 3 ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಮತ್ತು ಅದೇ ದಿನ ಚಾಸ-4 ಮತ್ತು 5 ಇವರ ಹೇಳಿಕೆಗಳನ್ನು ಕೂಡ ಪಡೆದುಕೊಂಡಿದ್ದೇನೆ. ದಿನಾಂಕ 23.10.2024 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 28.10.2024 ರಂದು ಆರೋಪಿಯ ಸ್ವ-ಖುಶಿ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 06.11.2024 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಿನಾಂಕ 23.09.2024 ರ ಪತ್ರವನ್ನು ನಿಪಿ-6 ಎಂದು ಮತ್ತು ಸಾಕ್ಷಿಯ ಸಹಿಯನ್ನು 6(ಎ) ಎಂದು, ವರದಿಯನ್ನು ನಿಪಿ-7 ಎಂದು, ಪ್ರ.ವ.ವರದಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ನಾನು ಸಾಕ್ಷಿದಾರರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಮತ್ತು ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ನಿಪಿ-7 ರಂತೆ ಸುಳ್ಳು ವರದಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲವೆಂದು ಗೊತ್ತಿದ್ದರೂ ಕೂಡ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ

ಎಂದರೆ ಸರಿಯಲ್ಲ.  ನನ್ನ ಮುಂದೆ ಯಾವುದೇ ಸಾಕ್ಷಿದಾರರು ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲ:

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.